ಪಿಡಬ್ಲೂ – 2

<u>ದಿನಾಂಕಃ 30.09.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೊಧಿಸಲಾಯಿತು</u>

<u>2 ನೇ ಪ್ರತಿವಾದಿ ಪರ ಪಾಟೀ ಸವಾಲುಃ ಶ್ರೀ ಕೆ ಟಿ ಎ ವಕೀಲರಿಂದಃ</u>

ಚಿಕ್ಕಮತ್ತೂರು ಗ್ರಾಮದ ಸ.ನಂ 67/2 ಹಿಸ್ಸೆ ಮೂಲಕ 1 ನೇ ಪ್ರತಿವಾದಿಯ ಗಂಡನಿಗೆ ಬಂದಿರುತ್ತದೆ ಎಂದರೆ ಸರಿ. ಮಂಜಪ್ಪ, ಬಂಗಾರಪ್ಪ ಮತ್ತು ಯೋಗರಾಜು ರವರು ಜೀವಂತವಾಗಿ ಇರುವಾಗ ಸ.ನಂ 67/2 ನ್ನು ಹಿಸ್ಸೆ ಮಾಡಿಕೊಂಡಿದ್ದರು ಎಂದರೆ ಸರಿ. ಹಿಸ್ಸೆ ಆದ ನಂತರ ಸದರಿಯವರು ಬದುಕಿದಾಗ ಬೇರೆ ಬೇರೆಯಾಗಿ ಜೀವನ ಮಾಡುತ್ತಿದ್ದರು ಎಂದರೆ ಬಂಗಾರಪ್ಪರವರು ಮಾತ್ರ ಬೇರೆಯಾಗಿದ್ದರು ಎಂದು ನುಡಿಯುತ್ತಾರೆ. ಯೋಗರಾಜ ಮತ್ತು ಮಂಜಯ್ಯ ರವರು ಒಟ್ಟಿಗೆ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ

67/2 1 ನೇ ಪ್ರತಿವಾದಿಯ ಗಂಡ ತೀರಿಹೋದ ನಂತರ 1 ನೇ ಪ್ರತಿವಾದಿಗೆ ದಾವಾ ಸ್ವತ್ತು ಪೌತಿ ಸಬೂಬು ಖಾತಾ ಬದಲಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ತೀರಿಹೋದ ನಂತರ 2 ನೇ ಪ್ರತಿವಾದಿಗೆ ದ್ಯಾವಮ್ಮ ಎಂಬ ಮಗಳು ಇದ್ದಳು ಎಂದರೆ ಸರಿ. ದ್ಯಾವಮ್ಮ ಮಂಜಯ್ಯ ತೀರಿಹೋದ ನಂತರ 2 ನೇ ಪ್ರತಿವಾದಿಯಲ್ಲಿ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ದ್ಯಾವಮ್ಮರವರು 2 ನೇ ಪ್ರತಿವಾದಿ ಯಶೋಧಮ್ಮರವರು ಇಡುವಾಣಿಯಲ್ಲಿ ಇರುವ ಮನೆಯ ತೀರಿಕೊಂಡರು ಎಂದರೆ ಸರಿ. ಅವರ ಶವಸಂಸ್ಕಾರವರನ್ನು ಇಡುವಾಣಿಯಲ್ಲಿ ಮಾಡಿರುತ್ತಾರೆ ಎಂದರೆ 1 ನೇ ವಾದಿಯ ಮನೆಯಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿಯವರು ದಿನಕರ್ಮದ ಕಾರ್ಡ್ ನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಕಾರ್ಡ್ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದ್ಯಾವಮ್ಮ ಮತ್ತು ಗೀತಾ ರವರ ನಡುವೆ ಪಂಚಾಯಿತಿ ದಿಃ 23.07.1994 ರಂದು ಆಗಿರುತ್ತದೆ. ಸದರಿ ಪಂಚಾಯಿತಿಯಲ್ಲಿ ಯೋಗರಾಜ, ಬಂಗಾರಪ್ಪ, ನನ್ನ ತಂದೆ, ಪಾರ್ಶನಾಥ ಮತ್ತು ಚೂಡರತ್ನ ರವರು ಇದ್ದರು. ಸದರಿ ಪಂಚಾಯಿತಿಯಲ್ಲಿ ಆದ ತೀರ್ಮಾನವನ್ನು ಬರವಣಿಗೆ ಮಾಡಿರುತ್ತೇವೆ. ಸದರಿ ಬರವಣಿಗೆಗೆ ಪಂಚಾಯಿತಿದಾರರು ಸಹಿ ಮಾಡಿರುತ್ತಾರೆ. ನಾನು ಸದರಿ ದಾಖಲೆಗೆ ಸಹಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಪಂಚಾಯಿತಿಯಲ್ಲಿ ಇದ್ದ ವ್ಯಕ್ತಿಗಳಲ್ಲಿ ನನ್ನ ತಂದೆ ಜೀವಂತ ಇರುತ್ತಾರೆ. ಪಂಚಾಯಿತಿಯಲ್ಲಿ ಆದ ಬರವಣಿಗೆಯನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆ ನ್ಯಾಯಾಲಯದ ಮುಂದೆ ನಿಶಾನೆಗೊಳಿಸಿದ ದಾಖಲೆಗಳಲ್ಲಿ ಇರುವುದಿಲ್ಲ.

ಸದರಿ ದಿನದಂದು ಯಾವುದೇ ಪಂಚಾಯಿತಿ ಆಗಿರುವುದಿಲ್ಲ ನಾನು ನನ್ನ ಅಕ್ಕನಿಗೆ ಸಹಾಯವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಮತ್ತೂರು ಗ್ರಾಮ ಸ.ನಂ 67/2 ರ ಸ್ವತ್ತನ್ನು 1 ನೇ ಪ್ರತಿವಾದಿಗೆ ಅವರ ಜೀವಂತಾವಧಿಯಲ್ಲಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿ.

3 ನೇ ಪ್ರತಿವಾದಿ ಪರ ಪಾಟೀ ಸವಾಲುಃ ಶ್ರೀ ಇ.ಎನ್ ವಕೀಲರಿಂದಃ–

ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಸಾಗರ